ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರು ರವರ ಕಛೇರಿ, ಪಾಲಿಕೆಯ ಮುಖ್ಯ ಕಛೇರಿಗಳು.
ನರಸಿಂಹರಾಜ ಚೌಕ, ಬೆಂಗಳೂರು-560 002.

ಸಂಖ್ಯೆ:. ಆ /ಪಿಆರ್/4741/15-16

ದಿನಾಂಕ: 16-07-2015

ಎಲ್ಲಾ ಮುಖ್ಯ ಅಭಿಯಂತರರು (ಪೂರ್ವ, ಪಶ್ಚಿಮ, ದಕ್ಷಿಣ, ರಾಜರಾಜೇಶ್ವರಿ ನಗರ, ಮಹದೇವಪುರ, ಮತ್ತು ಯಲಹಂಕ)

ಆಂತರಿಕ ಕಛೇರಿ ಟಿಪ್ಪಣಿ

ವಿಷಯ: 2015-16ನೇ ಸಾಲಿನ ಮಾನ್ಯ ಮುಖ್ಯ ಮಂತ್ರಿಗಳ ನಗರೋತ್ಥಾನ ಅನುದಾನದಡಿಯಲ್ಲಿ ಪಾಲಿಕೆಯ ವ್ಯಾಪ್ತಿಯಲ್ಲಿ ಎಂಟು ವಲಯಗಳಲ್ಲಿ ವಾರ್ಡ್‌ಮಟ್ಟದ ವಿವಿಧ ಕಾಮಗಾರಿಗಳು ಅಗತ್ಯವಿದ್ದು ಮತ್ತು ಪ್ರಾರಂಭಿಸುವ ಕುರಿತು.

ಉಲ್ಲೇಖ: ಈ ಕಛೇರಿಯ ಪತ್ರ ಸಂ: 659/15-16, ದಿನಾಂಕ: 22-06-2015.

****

ಮೇಲ್ಕಂಡ ವಿಷಯಕ್ಕೆ ಸಂಬ್ರಂಧಿಸಿದಂತೆ, ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಆರು ವಲಯಗಳಲ್ಲಿ ವಾರ್ಡ್‌ಮಟ್ಟದ ವಿವಿಧ ಕಾಮಗಾರಿಗಳು ಅಗತ್ಯವಿದ್ದು, ಸ್ಥಗಿತವಾಗಿರುವ ಕೆಲಸಗಳನ್ನು ಪಟ್ಟಿ ಮಾಡಿದ್ದು, ಇದರಲ್ಲಿ ಒಟ್ಟು 437 ಕೆಲಸಗಳಿದ್ದು, ಮತ್ತು ಒಟ್ಟು ಮೊತ್ತ ರೂ. 100.00 ಕೋಟಿಗಳಾಗುತ್ತದೆ. ದಿನಾಂಕ: 11-07-2015 ರಂದು ನಡೆದ ಸಭೆಯಲ್ಲಿ ಮಾನ್ಯ ಆಯುಕ್ತರು ಈ ಎಲ್ಲಾ ಕಾಮಗಾರಿಗಳನ್ನು ಪ್ರಾರಂಭಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ನಿಯಮಾನುಸಾರವಾಗಿ ಕೈಗೊಳ್ಳಲು ಸೂಚಿಸಿರುತ್ತಾರೆ. ಈ ಟಿಪ್ಪಣಿಗೆ ಕಾಮಗಾರಿಗಳ ಪಟ್ಟಿಯ ವಿವರಗಳನ್ನು ಮಾಹಿತಿಗಾಗಿ ಲಗತ್ತಿಸಿದೆ.

ಈ ವಿವರಗಳನ್ನು ಕೂಡಲೇ ನಿಯಮಾನುಸಾರವಾಗಿ ಪರಿಶೀಲಿಸಿ ಕಾಮಗಾರಿವಾರು ಹಾಲಿ ಸ್ಥಿತಿಯ ವರದಿಯನ್ನು ಈ ಕಛೇರಿಗೆ ಸಲ್ಲಿಸಲು ಮತ್ತು ಯಾವುದೇ ಕಾಮಗಾರಿಗಳು ಪ್ರಾರಂಭವಾಗದೇ ಇದ್ದಲ್ಲಿ ಕೂಡಲೇ ಪ್ರಾರಂಭಿಸಲು ಎಲ್ಲಾ ಕ್ರಮಗಳನ್ನು ಕೈಗೆತ್ತಿಕೊಳ್ಳಲು ಆದೇಶಿಸಲಾಗಿದೆ.

ಆಯುಕ್ತರು 16/7/15

ಅಡಕ: ಮೇಲಿನಂತೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
16/7/15

ಪ್ರತಿಯನ್ನು:
1. ಮಾನ್ಯ ಆಡಳಿತಗಾರರು ರವರ ಅವಗಾಹನೆಗಾಗಿ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ವಿಶೇಷ ಆಯುಕ್ತರು (ಯೋಜನೆ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
3. ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
4. ಪ್ರಧಾನ ಅಭಿಯಂತರರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.